ದಿನಾಂಕಃ 18.07.2024
(ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.)

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಕೆ.ಟಿ.ಟಿ., ವಕೀಲರಿಂದಃ

1. ನಮ್ಮ ತಾತಾ ಮಹದೇವರಾವ್‌ರವರಿಗೆ ಇಬ್ಬರು ಗಂಡು ಮಕ್ಕಳು, ಒಂದು ಹೆಣ್ಣು ಮಗಳು. ನಮ್ಮ ತಂದೆಗೆ ದಾವ ಸ್ವತ್ತು ಪಿತ್ರಾರ್ಜಿತವಾಗಿ ಬಂದಿದ್ದು ಈ ಬಗ್ಗೆ ವಿಭಾಗ ಪತ್ರ ಹ ಾಜರುಪಡಿಸಿರುತ್ತೇನೆ ಸುರೋಜಿ ರಾವ್ ರವರು ನಮ್ಮ ಚಿಕ್ಕತಾತಾನ ಮಗ. ಮಹದೋಜಿರಾವ್ ಬಿನ್ ಶಿವೋಜಿ ರಾವ್ ಯಾರು ಎಂದು ನನಗೆ ಗೊತ್ತಿಲ್ಲ. ದಾವೆಯನ್ನು ಹಳೆ ಸರ್ವೆ ನಂಬರು 107/2 , ಹೊಸ ಸರ್ವೆ ನಂಬರು 107/6 ಕ್ಕೆ ಸಂಬಂಧಿಸಿದಂತೆ ಸಲ್ಲಿಸಿದ್ದೇನೆ. 2018-19 ರಲ್ಲಿ ದಾವಾ ಸ್ವತ್ತಿಗೆ ಹೊಸ ನಂಬರು ನೀಡಿದ್ದು ಆ ಸಮಯದಲ್ಲಿ ನನ್ನ ತಂದೆಯ ಹೆಸರಿಗೆ ಖಾತೆಯಾಯಿತು ಎಂದರೆ ಸಾಕ್ಷಿ ಮೊದಲಿಗೆ ಜಂಟಿ ಖಾತೆಯಾಗಿತ್ತು, ನಂತರ ಪ್ರತ್ಯೇಕವಾಗಿ ಖಾತೆ ಆಗಿದೆ ಎಂದು ನುಡಿಯುತ್ತಾರೆ. ನಾರಾಯಣ್ ರಾವ್ ಮಲ್ಲಿಕ್ ಮತ್ತು ನಮ್ಮ ತಂದೆಯ ಹೆಸರಿನಲ್ಲಿ ಜಂಟಿ ಖಾತೆ ಇತ್ತು ಎಂದರೆ ಸರಿ.

2. ಖಾತಯು ವಿಭಾಗ ಪತ್ರದ ಆಧಾರದ ಮೇಲೆ ಆಗಿರುತ್ತದೆ. ಸದರಿ ವಿಭಾಗ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ 1985-86 ರಲ್ಲಿ ದಾವಾ ಸ್ವತ್ತು ಮಹದೋಜಿರಾವ್ ಬಿನ್ ಶಿವೋಜಿ ರಾವ್ ರವರ ಹೆಸರಿನಲ್ಲಿ ಖಾತೆ ಇದ್ದು, ಸುರೋಜಿ ರಾವ್ ಎಂಬುವವರು ಸ್ವಾಧೀನದಲ್ಲಿ ಇದ್ದರು ಎಂದರೆ ಸಾಕ್ಷಿ ಶಿವೋಜಿ ರಾವ್ ರವರು ನಮ್ಮ ಮುತ್ತಾತ ಎಂದು ನುಡಿಯುತ್ತಾರೆ. ಸದರಿ ಸುರೋಜಿ ರಾವ್ ರವರು ಇದ್ದಂತಹ ಕಾಲದಲ್ಲಿ ಏನೇನು ವ್ಯವಹಾರ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತು ಗ್ರಾಮ ಠಾಣಾಕ್ಕೆ ಹೊಂದಿಕೊಂಡಂತೆ ಇದೆ ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ.

3. ನಾನು ಜಗದಾಪುರ ಮತ್ತು ಬೆಂಗಳೂರು ಎರಡೂ ಕಡೆ ವಾಸವಾಗಿರುತ್ತೇನೆ. ಪ್ರತಿವಾದಿಗಳು ಸಲ್ಲಿಸಿರುವ ತಕರಾರು ಪತ್ರದ ಅಂಶಗಳು ನನಗೆ ಗೊತ್ತಿಲ್ಲ. ನಾನು ಬೆಂಗಳೂರಿಗೆ ಹೋಗಿ ಸುಮಾರು 40 – 50 ವರ್ಷಗಳಾಗಿದ್ದು, ಜಗದಾಪುರ ಗ್ರಾಮದಲ್ಲಿ ವಾಸವಾಗಿಲ್ಲ ಎಂದರೆ ಸರಿಯಲ್ಲ. ಸದರಿ ಗ್ರಾಮದಲ್ಲಿ ವಾಸವಾಗಿರುವ ಬಗ್ಗೆ ಮನೆ ಪೋಟೋ ಹಾಜರುಪಡಿಸಿದ್ದೇನೆ. ಈ ಬಗ್ಗೆ ಪೋಟೋ ಮತ್ತು ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಈ ಹಂತದಲ್ಲಿ ಸಾಕ್ಷಿಗೆ ಎರಡು ಪೋಟೋಗಳನ್ನು ತೋರಿಸಿದಾಗ, ಅದು ಯಾವ ಜಾಗ ಎಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಈ ಹಂತದಲ್ಲಿ ಸಾಕ್ಷಿಗೆ ಮತ್ತೊಂದು ಪೋಟೋವನ್ನು ತೋರಿಸಿದಾಗ, ಅದರಲ್ಲಿ ಇರುವ ವ್ಯಕ್ತಿ ಯಾರು ಎಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ.

(ಮುಂದುವರಿದ ಪಾಟೀ ಸವಾಲಿಗೆ ಸಮಾಯಾವಕಾಶ ಕೋರಿದ್ದು ನೀಡಲಾಯಿತು.)

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).**

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.

(ಬಿ.ಎನ್.ಉಷಾರಾಣಿ)
ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ,
ಚನ್ನಪಟ್ಟಣ.